# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ ಸಿ ನ್ಯಾಯಾಲಯ
# ಹಿರೇಕೆರೂರು

ಸಿ.ಸಿ. ನಂಃ 117/2020

ಸಿ.ಡಬ್ಲ್ಯೂಃ 5 ಪಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರುಃ - ಮಲ್ಲಿಕಾರ್ಜುನ ತಂದೆ ಸಿದ್ದಪ್ಪ ನಾಗಳ್ಳೇರ

ವಯಸ್ಸುಃ - 51 ವರ್ಷ

ಉದ್ಯೋಗ - ವ್ಯಾಪಾರ

ವಾಸಸ್ಥಳ - ಬಾಳಂಬೀಡ

ದಿನಾಂಕಃ 15-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಪರಿಚಯ. ಚಾಸಾ-6 ಪರಿಚಯ. ನಾನು, ಚಾಸಾ-1 ಹಾಗೂ 6 ರವರು ಗೆಳೆಯರು. ಸಿ. ಎಸ್. ಕಾಲೇಜು ಎದುರಿಗೆ ಅಪಘಾತವಾಗಿದ್ದರಿಂದ 2019 ರಲ್ಲಿ ನನ್ನ ಮತ್ತು ಚಾಸಾ-1 ಹಾಗೂ ಚಾಸಾ-6 ರವರ ಸಮಕ್ಷಮ ಪೋಲಿಸರು ಸ್ಥಳ ತೋರಿಸಿ 11-00 ರಿಂದ 12-00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ, ಪೋಟೋ ತೆಗೆದಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು,ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಹಾಗೂ 5 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಪಿ. ಕೆ. ಬಿ. ವಕೀಲರಿಂದಃ

ಆ ದಿನ ನಾನು ಹಾಗೂ ಚಾಸಾ-6 ರವರು ಒಟ್ಟಿಗೆ ಇದ್ದೇವು. ಅಪಘಾತವಾಗಿದ್ದರಿಂದ ಪಂಚನಾಮೆಗೆ ಸಹಿ ಮಾಡಲು ನಮ್ಮನ್ನು ಕರೆದಿದ್ದರು. ಏನು ವಿಷಯ ಎಂದು ನಾನು ಚಾಸಾ-1 ರವರನ್ನು ಕೇಳಿದ್ದೆ. ಪೋಲಿಸರು ನನಗೆ ಒತ್ತಾಯ ಮಾಡಿಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 15-06-2022

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು